ಕ್ರಿಃಮಿಸ್ಃನಂ.366/2021

ಪಿ.ಡಬ್ಲ್ಯೂ-1

**ದಿಃ 15-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ **ಪಾಟೀ ಸವಾಲುಃ** ಎದುರುದಾರರ ಪರ ಶ್ರೀ ಜೆ ಟಿ ಜೆ **ವಕೀಲರಿಂದ.**

ನನ್ನ ಮದುವೆ ಎದುರುದಾರರ ಜೊತೆ ಆದಿತ್ಯ ಪ್ಯಾಲೇಸ್ ಲ್ಲಿ ದಿಃ 10-02-2019 ರಂದು ನೆರವೇರಿರುತ್ತದೆ ಎಂದರೆ ಸರಿ. ಮದುವೆಯಾದ ನಂತರ ನನ್ನ ಗಂಡ, ನನ್ನ ಅತ್ತೆ ಹಾಗೂ ಅವರ ಕುಟುಂಬದವರ ಜೊತೆ ಸುಖವಾಗಿ ಜೀವನ ಮಾಡುತ್ತಿದ್ದೆ ಎಂದರೆ ಸರಿ. ದಿಃ 21-09-2020 ರಂದು ನಾನು ನವನೀತ್ ಎಂಬುವ ಗಂಡು ಮಗುವಿಗೆ ಜನನ ನೀಡಿದೆ ಎಂದರೆ ಸರಿ. ದಿಃ 04-10-2020 ರಂದು ನಿಮ್ಮ ಮಗುವನ್ನು ನಿಮ್ಮ ಗಂಡನಿಗೆ ಹಾಗೂ ಅತ್ತೆ ಮಾವನಿಗೆ ಹೇಳದೆ ಕರೆದುಕೊಂಡು ನಿಮ್ಮ ತವರುಮನೆಗೆ ಹೋಗಿರುತ್ತಿರಾ ಎಂದರೆ ಸಾಕ್ಷಿ ನನಗೆ ಬಾಣಂತನ ಮಾಡಿರುವುದಿಲ್ಲ ಹಾಗಾಗಿ ಹೋಗಿರುತ್ತೇನೆಂದು ನುಡಿದಿರುತ್ತಾರೆ. ಮಗುವಿಗೆ ಜ್ಯಾಂಡಿಸ್ ಇದ್ದ ಕಾರಣ ಟ್ರೆಟ್ ಮೆಂಟ್ ಇದ್ದು ಅದು ಮುಗಿದ ನಂತರ ಕಳುಹಿಸುತ್ತೇವೆ ಎಂದು ಹೇಳಿದರೂ ಅವರ ಮಾತನ್ನುನೀವು ಕೇಳಿರುವುದಿಲ್ಲ ಎಂದರೆ ಅವರು ನನಗೆ ತವರು ಮನೆಗೆ ಕಳುಹಿಸುವುದಿಲ್ಲ ಎಂದು ಹೇಳಿದ ಕಾರಣ ನಾನು ಕರೆದುಕೊಂಡು ಬಂದಿರುತೆತೇನೆಂದು ನುಡಿದಿರುತ್ತಾರೆ. ನೀವು ನಿಮ್ಮ ತವರುಮನೆಗೆ ಹೋದ ನಂತರ ನೀವು ಮರಳಿ ನಿಮ್ಮ ಗಂಡನ ಮನೆಗೆ ಹೋಗಿರುವುದಿಲ್ಲ ಎಂದರೆ ಸಾಕ್ಷಿ ಅವರು ಬಂದು ಕರೆದುಕೊಂಡು ಹೋಗಿರುವುದಿಲ್ಲ ಎಂದು ನುಡಿದಿರುತ್ತಾರೆ. ನಿಮ್ಮ ತವರುಮನೆಗೆ ಬಂದ ಮೇಲೆ ನೀವು ಗಂಡನ ಮನೆಗೆ ಹೋಗಬೇಕಾಗಿರುತ್ತದೆ ಎಂದರೆ ಸಾಕ್ಷಿ ಅವರು ನನ್ನ ನಡೆತೆ ಬಗ್ಗೆ ಪ್ರಶ್ನಿಸಿದ ಕಾರಣ ನಾನು ಹೋಗಿರುವುದಿಲ್ಲ ಎಂದು ನುಡಿದಿರುತ್ತಾರೆ.

ಎದುರುದಾರರು ಕರೆ ಮಾಡಿ ನನಗೆ ಕೆಟ್ಟದಾಗಿ ಬೈಯ್ಯುತ್ತಿದ್ದು, ಅದರ ರೆಕಾರ್ಡ ನನ್ನ ಹತ್ತಿರ ಇರುತ್ತದೆ ಅದನ್ನು ನ್ಯಾಯಾಲಯಕ್ಕೆ ನೀಡಲು ಯಾವುದೇ ತೊಂದರೆ ಇರುವುದಿಲ್ಲ.

ಆ ತರಹದ ಕರೆಯ ರೆಕಾರ್ಡ ಇರುವುದಿಲ್ಲ ಗಂಡನ ಮನೆಗೆ ಹೋಗಲು ಇಷ್ಟ ಇಲ್ಲದೆ ಸುಳ್ಳು ಹೇಳುತ್ತಿದ್ದಿರಾ ಎಂದರೆ ಸರಿಯಲ್ಲ. ನಂತರ ದಿಃ 24-12-2021 ರಂದು ತರೀಕೆರೆಯ ಸಿಡಿಪಿಓ ಕಛೇರಿಗೆ ಹೋಗಿ ಎದುರುದಾರರ ಮೇಲೆ ದೂರನ್ನು ಸಲ್ಲಿಸಿರುತ್ತಿರಾ ಎಂದರೆ ಸರಿ. ನಾನು ಒಂದು ವರ್ಷದಿಂದ ನನ್ನ ತವರುಮನೆಯಲ್ಲಿ ಇದ್ದೆ ಎಂದರೆ ಸರಿ. ಆ ಸಂದರ್ಭದಲ್ಲಿ ನಿಮ್ಮ ಹಾಗೂ ಎದುರುದಾರರ ನಡುವೆ ಯಾವುದೇ ಗಲಾಟೆ ನಡೆದಿರುವುದಿಲ್ಲ ಎಂದರೆ ಸಾಕ್ಷಿ ಪ್ರತಿದಿನ ನನಗೆ ಕರೆ ಮಾಡಿ ಜಗಳ ಮಾಡುತ್ತಿದ್ದರು ಎಂದು ನುಡಿದಿರುತ್ತಾರೆ. ಎದುರುದಾರರು ನಿಮಗೆ ಕರೆ ಮಾಡಿ ಹಿಂಸೆ ನೀಡುತ್ತಿರುವ ಬಗ್ಗೆ ಸಿಡಿಪಿಓ ಕಛೇರಿಯಲ್ಲಿ ದೂರನ್ನು ನೀಡುವಾಗ ತಿಳಿಸಿರುತ್ತಿರಾ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಎದುರುದಾರರು ನಿಮಗೆ ಯಾವುದೇ ಕರೆ ಮಾಡಿ ಹಿಂಸೆ ನೀಡುತ್ತಿರಲಿಲ್ಲ, ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸಾಕ್ಷಿ ಸರಿಯಲ್ಲ ಎಂದು ನುಡಿದಿದ್ದು, ಮುಂದುವರಿದು ಹಿರಿಯರು ಗಂಡನ ಜೊತೆ ಜೀವನ ಮಾಡಬೇಕೆಂದು ತಿಳಿಸಿದ ಕಾರಣ ಎದುರುದಾರರು ಬೈಯ್ಯುತ್ತಿದ್ದರು ನಾನು ಸಹಿಸಿಕೊಂಡು ಇದ್ದೆ ಎಂದು ನುಡಿದಿರುತ್ತಾರೆ. ಎದುರುದಾರರು ಯಾವುದೇ ರೀತಿ ನಿಮ್ಮನ್ನು ಬೈಯ್ಯುತ್ತಿರಲಿಲ್ಲ ಎಂದರೆ ಸರಿಯಲ್ಲ. ದಿಃ 12-02-2022 ರಂದು ನಿಮ್ಮ ಮಾವನವರಿಗೆ ಹುಷಾರಿಲ್ಲದ ಕಾರಣ ಅವರನ್ನು ನೋಡಲು ನೀವು ಬೆಂಗಳೂರಿಗೆ ಹೋಗಿರುತ್ತಿರಾ ಎಂದರೇ ಸಾಕ್ಷಿ ದಿನಾಂಕ ನೆನಪಿರುವುದಿಲ್ಲ, ಹೋಗಿರುತ್ತೇನೆಂದು ನುಡಿದಿರುತ್ತಾರೆ. ಆದಾದ ನಂತರ ನೀವು ಅಲ್ಲಿ ನೀವು ನಿಮ್ಮ ಗಂಡ, ಅತ್ತೆ ಕುಟುಂಬದವರೊಂದಿಗೆ ಸಂಸಾರ ಮಾಡುತ್ತಿದ್ದಿರಿ ಎಂದರೆ ಸಾಕ್ಷಿ ಜೊತೆಯಲ್ಲಿ ಇದ್ದೆವು ಆದರೆ ಖುಷಿಯಾಗಿ ಇರಲಿಲ್ಲ ಎಂದು ನುಡಿದಿರುತ್ತಾರೆ. ದಿಃ 11-04-2023 ರಂದು ನೀವು 2 ನೇ ಮಗುವಿಗೆ ಬೆಂಗಳೂರಿನಲ್ಲಿ ಜನನ ನೀಡಿರುತ್ತಿರಾ ಎಂದರೆ ಸರಿ.

ಆ ಸಂದರ್ಭದಲ್ಲಿ ನಿಮ್ಮ ಖರ್ಚು ವೆಚ್ಚಗಳನ್ನು ನಿಮ್ಮ ಗಂಡನಾದ ಎದುರುದಾರರು ನೋಡಿಕೊಳ್ಳುತ್ತಿದ್ದು ಎಂದರೆ ಸರಿ. ದಿಃ 01-05-2023 ರಂದು ನೀವು ನಿಮ್ಮ ತವರುಮನೆಗೆ

ಇಬ್ಬರು ಮಕ್ಕಳನ್ನು ಕರೆದುಕೊಂಡು ಬಂದಿರುತ್ತೀರಾ ಎಂದರೆ ಸರಿ. ದಿಃ 06-08-2023 ರಂದು ವಾಪಾಸ್ಸು ಬೆಂಗಳೂರಿಗೆ ಎದುರುದಾರರ ಮನೆಗೆ ಹೋಗಿರುತ್ತೀರಾ ಎಂದರೆ ಸಾಕ್ಷಿ ದಿನಾಂಕ ನೆನಪಿಲ್ಲ ಹೋಗಿರುತ್ತೇನೆಂದು ನುಡಿದಿರುತ್ತಾರೆ. ನೀವು ಎದುರುದಾರರ ಜೊತೆ ಚೆನ್ನಾಗಿದ್ದು, ಸಿಡಿಪಿಓ ಕಛೇರಿಯಲ್ಲಿ ನೀಡಿದ ದೂರನ್ನು ತೆಗೆದುಕೊಂಡಿಲ್ಲ ಎಂದರೆ ಸಾಕ್ಷಿ ಸಿಡಿಪಿಓ ಕಛೇರಿಯಿಂದ ಕರೆ ಬಂದಿದ್ದು ದೂರನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ತಿಳಿಸಿದ್ದು, ಆದರೆ ದೂರನ್ನು ವಾಪಸ್ಸು ತೆಗೆದುಕೊಂಡಿಲ್ಲ ಎಂದು ನುಡಿದಿರುತ್ತಾರೆ. ನಾನು ನನ್ನ ತವರುಮನೆಗೆ ಬಂದ ನಂತರ ಸಿಡಿಪಿಓ ಕಛೇರಿಯಿಂದ ಯಾವುದೇ ಕರೆ ಬಂದಿರುವುದಿಲ್ಲ ಹಾಗಾಗಿ ನಾನು ದೂರನ್ನು ವಾಪಸ್ಸು ತೆಗೆದುಕೊಂಡಿರುವುದಿಲ್ಲ ಸಾಕ್ಷಿ ಮುಂದುವರಿದು ಎದುರುದಾರರು ನನ್ನ ಜೊತೆ ಕಿರಿ ಕಿರಿ ಮಾಡುತ್ತಿದ್ದ ಕಾರಣ ನಾನು ಸಂಪೂರ್ಣವಾಗಿ ದೂರನ್ನು ವಾಪಾಸ್ಸು ತೆಗೆದುಕೊಳ್ಳಲು ನಿರ್ಧರಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾನು 2 ನೇ ಮಗುವಿಗೆ ಜನನ ನೀಡಿದ ಸಂದರ್ಬದಲ್ಲಿ ನನ್ನ ಅಣ್ಣನಾದ ಪ್ರಭು ದರ್ಶನ್ ರವರಿಗೆ ಮದುವೆ ನಡೆದಿರುತ್ತದೆ. ನವೆಂಬರ್ 16 2024 ರಂದು ನಿಮ್ಮ ಗಂಡನ ಮನೆಯಲ್ಲಿ ಯಾರಿಗೂ ಹೇಳದಂತೆ ನಿಮ್ಮ ಮೇಲಿದ್ದ ಪ್ರಕರಣಗಳಿಗೆ ಜಾಮೀನು ಪಡೆಯಲು ನಿಮ್ಮ ತವರುಮನೆಗೆ ಬಂದಿರುತ್ತೀರಾ ಎಂದರೆ ಸಾಕ್ಷಿ ನನಗೆ ಜಾಮೀನು ಮೊದಲೇಸಿಕ್ಕಿದ್ದು ಅಕ್ಟೋಬರ್ 27 2024 ರಂದು ಎದುರುದಾರರು ನನ್ನನ್ನು ಹೊಡೆದು ಮನೆಯಿಂದ ಆಚೆ ಹಾಕಿದರು. ಆಗ ನನ್ನ ತಂದೆಯ ಸ್ನೇಹಿತರು ನನ್ನ ಹಾಗೂ ಎದುರುದಾರರನ್ನು ಸಮಾಧಾನ ಮಾಡಿ ಬಿಟ್ಟು ಹೋದರು ಮತ್ತೆ ಎದುರುದಾರರು ನನ್ನ ಜೊತೆ ಗಲಾಟೆ ಮಾಡಿದ ಕಾರಣ ಮತ್ತೆ ವಾಪಾಸ್ಸು ಬಂದಿರುತ್ತೇನೆ. ನವೆಂಬರ್ 14 2024 ರಂದು ನನ್ನ ತವರುಮನೆಗೆ ವಾಪಾಸ್ಸು ಬಂದಿರುತ್ತೇನೆಂದರೆ ಸರಿ.

2024 ಮಾರ್ಚ ನಲ್ಲಿ ನಾನು ಜಾಮೀನನ್ನು ಪಡೆದಿರುತ್ತೇನೆ ಆ ಸಮಯದಲ್ಲಿ ನಾನು ಬೆಂಗಳೂರಿನಿಂದ ನನ್ನ ತವರುಮನೆಗೆ ಬಂದಿರುತ್ತೇನೆ. ನೀವು ಜಾಮೀನು ಪಡೆಯಲು ನಿಮ್ಮ

ಗಂಡನ ಮನೆಯಲ್ಲಿ ಸುಳ್ಳು ಹೇಳಿ ನವೆಂಬರ್ ತಿಂಗಳಲ್ಲಿ ನಿಮ್ಮ ತವರುಮನೆಗೆ ಬಂದಿರುತ್ತೀರಾ ಅದಕ್ಕೂ ಮುಂಚೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಎದುರುದಾರರು ಒಟ್ಟಾಗಿ ಚೆನ್ನಾಗಿದ್ದು, ಎದುರುದಾರರು ಯಾವುದೇ ಗಲಾಟೆ ಮಾಡದೇ ಇದ್ದರೂ ಸಹ ಅವರ ಮೇಲೆ ಸುಳ್ಳು ದೂರುಗಳನ್ನು ನೀಡಿ ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ನಾನು ಎಂಕಾಂ ಪದವಿ ಪಡೆದಿರುತ್ತೇನೆಂದರೆ ಸರಿ, ಆದರೆ ಎಲ್ಲೂ ಕೆಲಸ ಮಾಡುತ್ತಿಲ್ಲ. ಈಗಲೂ ನಿಮಗೆ ಕೆಲಸ ಸಿಗುವ ಸಾಧ್ಯತೆ ಇದೆ ಎಂದರೆ ಇರಬಹುದು ಎಂದು ನುಡಿದಿರುತ್ತಾರೆ. ಎದುರುದಾರರ ಜೊತೆ ಬೇರೆ ಮನೆಯಲ್ಲಿ ವಾಸ ಮಾಡಬೇಕೆಂಬ ಉದ್ದೇಶದಿಂದ ನೀವು ನಿಮ್ಮ ತವರುಮನೆಯಲ್ಲಿರುತ್ತಿರಾ ಎಂದರೆ ಸರಿಯಲ್ಲ. ಎದುರುದಾರರು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಎದುರುದಾರರ ಮೇಲೆ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತಿರಾ ಎಂದರೆ ಸರಿಯಲ್ಲ.

**<u>ಮರುವಿಚಾರಣೆ</u>** : ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ರವರು, ತರೀಕೆರೆ.